ಇ) ಈ ಕಾಮಗಾರಿಯ ತಾಂತ್ರಿಕ ಶಕ್ಯತೆ ನೀರಿನ ಲಭ್ಯತೆಯ ಬಗ್ಗೆ ಸಂಪೂರ್ಣ ಸರ್ವೆ ಕಾರ್ಯಕೈಗೊಳ್ಳಬೇಕಾಗಿದೆ. ಆರ್ಥಿಕ ಲಭ್ಯತೆ ಹಾಗೂ ಸರ್ವೆಕಾರ್ಯ ಕೈಗೊಂಡು ಯೋಜನಾ ವರದಿಯನ್ನು ತಯಾರಿಸಿ ಮುಂದಿನ ಸಾಲುಗಳಲ್ಲಿ ಪರಿಶೀಲಿಸಲಾಗುವುದು.

ಚಿಕ್ಕಪೇಟೆ ಕ್ಷೇತ್ರದ ನೀರಿನ ಪೈಪ್‌ಗಳ ಬದಲಾವಣೆ

827 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರದ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿರುವ ನೀರಿನ ಪೈಪುಗಳು ತುಂಬಾ ಹಳೆಯದಾಗಿದ್ದು, ಸರಿಯಾಗಿ ನೀರು ಸರಬರಾಜು ಆಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

1) ಹೌದು.

2) ಬೆಂಗಳೂರು ಜಲ ಮಂಡಲಿಯು ನಗರದಲ್ಲಿ ಬಹು ಹಿಂದೆ ಹಾಕಲಾಗಿದ್ದ ಹಳೆಯ ಮತ್ತು ತುಕ್ಕು ಹಿಡಿದ ಕೊಳವೆಗಳನ್ನು ಬದಲಾಯಿಸುವ ಪ್ರಸ್ತಾವನೆಯನ್ನು ಕೈಗೆತ್ತಿಕೊಂಡಿದೆ. ಹಳೆಯ ತರಗುಪೇಟೆ, ಮಾಮೂಲು ಪೇಟೆ ಮತ್ತು ಮಂಡಿಪೇಟೆ ಪ್ರದೇಶಗಳಲ್ಲಿ 3 ಅಂಗುಲ ವ್ಯಾಸದ ಕೊಳವೆಗಳನ್ನು ಬದಲಾಯಿಸಲು ರೂ. 5.25 ಲಕ್ಷಗಳ ಒಂದು ಅಂದಾಜು ಪಟ್ಟಿಯನ್ನು ಮಂಜೂರು ಮಾಡಲಾಗಿದೆ. ಶೀಘ್ರದಲ್ಲಿಯೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಮುಂದುವರಿದಂತೆ ಈ ಯೋಜನೆಯ ಅಡಿಯಲ್ಲಿ ಚಿಕ್ಕಪೇಟೆ ಕ್ಷೇತ್ರದಲ್ಲಿ 6 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಂದಾಜು ಪಟ್ಟಿಗಳನ್ನು ತಯಾರಿಸಿದೆ. ಹಂತ ಹಂತವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ನಗರಪಾಲಿಕೆಯ ವಸತಿ ಗೃಹಗಳು ಕುಸಿದು ಹೋಗಿರುವುದು

828 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ದಿನಾಂಕ 14-06-1996ರಂದು ಬಿದ್ದುಹೋಗಿರುವ ವಸತಿ ಗೃಹಗಳು ನಗರ ಪಾಲಿಕೆಗೆ ಸಂಬಂಧಿಸಿದವೇ?

ಆ) ಇದರಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು? ಗಾಯಗೊಂಡವರ ಸಂಖ್ಯೆ ಎಷ್ಟು?

ಇ) ವಸತಿ ಗೃಹಗಳನ್ನು ನಿರ್ಮಿಸಲಾಗಿದ್ದು ಎಂದು? ಬಿದ್ದು ಹೋಗಲು ಕಾರಣವೇನು?

ಈ) ಕಟ್ಟಡ ಕುಸಿದ ಬಗ್ಗೆ ತನಿಖೆ ನಡೆಸಲು ಸರ್ಕಾರ ಯಾರನ್ನಾದರೂ ನೇಮಕಮಾಡಿದೆಯೇ?